ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 18–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | 1) ಕೃಷಿ ಮೇಳ 2015:<br><br>ಉದ್ಘಾಟನೆ ಹಾಗೂ ರೈತ ಪ್ರಶಸ್ತಿಗಳ ಪ್ರದಾನ ಸಮಾರಂಭ:<br><br>ಶ್ರೀ ವಜುಭಾಯಿ ವಾಲಾ,<br>ಘನತೆವೆತ್ತ ರಾಜ್ಯಪಾಲರು, ಕರ್ನಾಟಕ<br><br>ಅಧ್ಯಕ್ಷತೆ:<br>ಶ್ರೀ ಕೃಷ್ಣ ಭೈರೇಗೌಡ,<br>ಕೃಷಿ ಸಚಿವರು<br><br>ಮುಖ್ಯ ಅತಿಥಿಗಳು:<br>ಶ್ರೀ ಕೌಶಿಕ್ ಮುಖರ್ಜಿ,<br>ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | 19–11–2015<br>ಗುರುವಾರ<br>ಬೆಳಿಗ್ಗೆ<br>11–30 ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ, (ಜಿ.ಕೆ.ವಿ.ಕೆ.) ಬೆಂಗಳೂರು |
| | ವಿಶೇಷ ಸೂಚನೆ:<br>ಈ ಸಮಾರಂಭಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದೆ. ವಾಹನವು ಅಂದು ಬೆಳಿಗ್ಗೆ 10–45 ಗಂಟೆಗೆ ಬೆಳಿಗ್ಗೆ ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ಹೊರಡಲಿದೆ | 19–11–2015<br>ಗುರುವಾರ<br>ಮಧ್ಯಾಹ್ನ<br>2–30 ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ, (ಜಿ.ಕೆ.ವಿ.ಕೆ.) ಬೆಂಗಳೂರು |

| | | | |
|---|---|---|---|
| | 2) ಅತ್ಯುತ್ತಮ ರೈತ/ರೈತಮಹಿಳೆ ಪ್ರಶಸ್ತಿ ಪ್ರದಾನ ಸಮಾರಂಭ<br><br>ಶ್ರೀ ಹೆಚ್.ಕೆ. ಪಾಟೀಲ್,<br>ಗ್ರಾಮೀಣಾಭಿವೃದ್ಧಿ ಸಚಿವರು,<br>ಶ್ರೀ ಡಿ.ಕೆ. ಶಿವಕುಮಾರ್,<br>ಇಂಧನ ಸಚಿವರು<br><br>ವಿಶೇಷ ಸೂಚನೆ:<br>ಈ ಸಮಾರಂಭಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದೆ. ವಾಹನವು ಅಂದು ಮಧ್ಯಾಹ್ನ 1-30 ಗಂಟೆಗೆ ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ನಿಗದಿತ ಸ್ಥಳದತ್ತ ಹೊರಡಲಿದೆ | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಈ ವಾರದ ಬೆಳ್ಳಿಸಿನಿಮಾ-ಬೆಳ್ಳಿಮಾತು: " ಮುನ್ನೀಫ " ಚಲನಚಿತ್ರ ಪ್ರದರ್ಶನ, ಸಂವಾದ

ಬೆಂಗಳೂರು, ನವೆಂಬರ್ 18 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಪ್ರತಿ ಶನಿವಾರ ನಡೆಸುವ ಬೆಳ್ಳಿಸಿನಿಮಾ-ಬೆಳ್ಳಿಮಾತು ಕಾರ್ಯಕ್ರಮದಡಿ ನವೆಂಬರ್ 21 ರ ಶನಿವಾರದಂದು ಬೆಳ್ಳಿ ಸಿನಿಮಾ " ಮುನ್ನೀಫ " ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿದೆ. ಈ ಚಿತ್ರದ ನಿರ್ದೇಶಕ ಉಮಾಶಂಕರಸ್ವಾಮಿ ಅವರಿಂದ ಬೆಳ್ಳಿಮಾತು ಸಂವಾದ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಬೆಂಗಳೂರು ಮಿಲ್ಲರ್ಸ್ ರಸ್ತೆಯ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ನವೆಂಬರ್ 21 ರಂದು ಸಂಜೆ 4-00 ಗಂಟೆಗೆ ನಡೆಯುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್. ವಿ. ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು. ಮುಖ್ಯ

ಅತಿಥಿಗಳಾಗಿ  ಚಿತ್ರದ ಸಿನಿಮಾಟೋಗ್ರಾಫರ್ ಜಿ. ಎಸ್. ಭಾಸ್ಕರ್ ಅವರು ಪಾಲ್ಗೊಳ್ಳುವರು ಎಂದು ಹೆಚ್. ಬಿ. ದಿನೇಶ್  ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಬಿಡಿ:ಬಾಬು:ಕೆಎಂ.

## ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರ ರಚನೆ

**ಬೆಂಗಳೂರು,  ನವೆಂಬರ್ 18 (ಕರ್ನಾಟಕ ವಾರ್ತೆ)**

ಕರ್ನಾಟಕ ಪೊಲೀಸ್ ಕಾಯ್ದೆ, 1963 ಮತ್ತು ತಿದ್ದುಪಡಿ ಕಾಯ್ದೆ, 2012ರ ಕಲಂ 20–ಡಿ ಅಡಿ ಸರ್ಕಾರವು ವಿಭಾಗ ಮಟ್ಟದಲ್ಲಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಪ್ರತಿ ಜಿಲ್ಲೆಗೆ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರವನ್ನು ರಚಿಸಿದೆ.  ಈ ಪ್ರಾಧಿಕಾರಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಮತ್ತು ಬೆಂಗಳೂರು ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ ಅಪರ ಪೊಲೀಸ್ ಆಯುಕ್ತರು (ಆಡಳಿತ) ಇವರನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿದೆ. ಸಾರ್ವಜನಿಕರು ಪೊಲೀಸ್ ಅಧಿಕಾರಿಗಳಾದ ಉಪ ಪೊಲೀಸ್ ಅಧೀಕ್ಷಕರು ಮತ್ತು ಅವರ ಕೆಳಗಿನ ಹಂತದ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ದೂರು ಹಾಗೂ ಅಹವಾಲು ಇದ್ದಲ್ಲಿ ಈ ಕೆಳಕಂಡ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳ ಕಛೇರಿಗಳಿಗೆ ತಮ್ಮ ದೂರು ಅರ್ಜಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದು ಎಂದು  ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ತಿಳಿಸಿದ್ದಾರೆ.

| ಕ್ರ. ಸಂ. | ಜಿಲ್ಲೆ | ಸದಸ್ಯ ಕಾರ್ಯದರ್ಶಿಗಳು |
|---|---|---|
| 1. | ಬೆಂಗಳೂರು ನಗರ ಜಿಲ್ಲೆ | ಅಪರ ಪೊಲೀಸ್ ಆಯುಕ್ತರು (ಆಡಳಿತ),<br>ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು ನಗರ,<br>ಇನ್ಫೆಂಟ್ರಿ ರಸ್ತೆ, ಬೆಂಗಳೂರು<br>ದೂರವಾಣಿ: 080–22943359 |
| 2. | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ,<br>ನಂ.5, ಮಿಲ್ಲರ್ಸ್ ರಸ್ತೆ, ಬೆಂಗಳೂರು.<br>ದೂರವಾಣಿ: 080–22264350 |
| 3. | ರಾಮನಗರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ,<br>ಪೊಲೀಸ್ ಭವನ, 2ನೇ ಮಹಡಿ, ರಾಮನಗರ–59.<br>ದೂರವಾಣಿ: 080–27273700 |
| 4. | ಕೋಲಾರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ,<br>ಎಂ.ಬಿ.ರಸ್ತೆ, ಕೋಲಾರ.<br>ದೂರವಾಣಿ: 08152–243060 |
| 5. | ಚಿಕ್ಕಬಳ್ಳಾಪುರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ<br>ದೂರವಾಣಿ: 08156–262000 |
| 6. | ತುಮಕೂರು ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ,<br>ಬಿ.ಹೆಚ್.ರಸ್ತೆ, ತುಮಕೂರು.<br>ದೂರವಾಣಿ: 08162–272451 |

| | | |
|---|---|---|
| 7. | ಚಿತ್ರದುರ್ಗ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ,<br>ತುರುವನೂರು ರಸ್ತೆ, ಚಿತ್ರದುರ್ಗ-577502.<br>ದೂರವಾಣಿ: 08194-222781 |
| 8. | ದಾವಣಗೆರೆ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ,<br>ದಾವಣಗೆರೆ.<br>ದೂರವಾಣಿ: 08192-253400 |
| 9. | ಶಿವಮೊಗ್ಗ ಜಿಲ್ಲೆ. | ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ,<br>ಸಾಗರ ರಸ್ತೆ, ಶಿವಮೊಗ್ಗ -577201.<br>ದೂರವಾಣಿ: 08182-261400 |

* ಈ ಮೇಲ್ಕಂಡ ಎಲ್ಲಾ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಗಳಿಗೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರು ಅಧ್ಯಕ್ಷರಾಗಿದ್ದು, ಪ್ರಾದೇಶಿಕ ಆಯುಕ್ತರ ಕಛೇರಿಯ ವಿಳಾಸ: 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಶಾಂತಿನಗರ, ಬೆಂಗಳೂರು-27, ದೂರವಾಣಿ: 080-22109680

ಪಲ್ಲವಿ/ಕೆಎಂ

# ಮಕ್ಕಳ ಸುರಕ್ಷತಾ ನೀತಿ

**ಬೆಂಗಳೂರು, ನವೆಂಬರ್ 18 (ಕರ್ನಾಟಕ ವಾರ್ತೆ)**

**"ಮಕ್ಕಳ ಸುರಕ್ಷತಾ ನೀತಿ" ರೂಪಿಸುವ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಕ್ಕಾಗಿ ದಿನಾಂಕ 27-11-2015 ರಂದು ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಜ್ಞಾನ ಭಾರತಿ ಸಭಾಂಗಣದಲ್ಲಿ ಸಭೆ ಕರೆಯಲಾಗಿದೆ. ಈ ಬಗ್ಗೆ ಆಸಕ್ತ ಸಾರ್ವಜನಿಕರು ಹಾಗೂ ಪೋಷಕರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಬಹುದಾಗಿದೆ.**

**ಪಲ್ಲವಿ/ಕೆಎಂ**

# ಸಾರಿಗೆ ಅದಾಲತ್

**ಬೆಂಗಳೂರು, ನವೆಂಬರ್ 18 (ಕರ್ನಾಟಕ ವಾರ್ತೆ)**

**ಬೆಂಗಳೂರು (ಉತ್ತರ) ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಅಧಿಕಾರಿಗಳ ಕಚೇರಿ, ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಯಶವಂತಪುರ, ಬೆಂಗಳೂರು -560 022, ಇಲ್ಲಿ ದಿನಾಂಕ 25-11-2015 ರಂದು ಮಧ್ಯಾಹ್ನ 3-00 ಗಂಟೆಗೆ "ಸಾರಿಗೆ ಅದಾಲತ್" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಈ ಕಚೇರಿಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ವೀಕರಿಸಿ ಕಾನೂನು ರೀತ್ಯ ಸೂಕ್ತ ಪರಿಹಾರಗಳನ್ನು ಸೂಚಿಸಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಲಿದ್ದಾರೆ.**

**ಪಲ್ಲವಿ/ಬಾಬು/ಕೆಎಂ**

## ಉದ್ಯೋಗ ಆಧಾರ್ ಯೋಜನೆ : ಸರಳೀಕೃತ

ಬೆಂಗಳೂರು, ನವೆಂಬರ್ 18 (ಕರ್ನಾಟಕ ವಾರ್ತೆ)

ರಾಜ್ಯದ ಕೈಗಾರಿಕೋದ್ಯಮಿಗಳು ತಮ್ಮ ಕೈಗಾರಿಕೆಗಳನ್ನು ನೋಂದಾಯಿಸಿಕೊಳ್ಳುವ ಪ್ರಕ್ರಿಯೆಯನ್ನು ಸರಳೀಕೃತಗೊಳಿಸಿದ್ದು, ಈ ಹಿಂದೆ ಚಾಲ್ತಿಯಲ್ಲಿದ್ದ ಐಇಎಂ ಭಾಗ–1 ಮತ್ತು ಭಾಗ–2 ನ್ನು ಪಡೆಯುವ ಪದ್ದತಿಯನ್ನು ನಿಲ್ಲಿಸಲಾಗಿದೆ. ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಯಾವುದೇ ಅನುಮತಿ ಪಡೆದುಕೊಳ್ಳುವ ಅಗತ್ಯವಿರುವುದಿಲ್ಲ. ಈಗ ಹೊಸದಾಗಿ ಉದ್ಯೋಗ ಆಧಾರ ಯೋಜನೆ ಜಾರಿಗೆ ಬಂದಿದ್ದು, ಉದ್ದಿಮೆದಾರರು ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿ ಉತ್ಪಾದನೆ/ಚಟುವಟಿಕೆಯನ್ನು ಪ್ರಾರಂಭಿಸಿದ ನಂತರ, ಅವರೇ ನೇರವಾಗಿ ಅಂತರ್ಜಾಲ ಸಂಪರ್ಕದಿಂದ ತಮ್ಮ ಸ್ಥಳದಲ್ಲಿಯೇ ಕೈಗಾರಿಕೆಗಳನ್ನು ನೋಂದಾಯಿಸಿ ಕೊಳ್ಳಬಹುದಾಗಿದೆ. ಸರಳೀಕೃತ ಅರ್ಜಿಯಲ್ಲಿ ಆಧಾರ್ ಕಾರ್ಡ್ ಸಂಖ್ಯೆ ಹಾಗೂ ಬ್ಯಾಂಕ್ ಖಾತೆಯ ವಿವರಗಳನ್ನು ಅರ್ಜಿಯಲ್ಲಿ ನಮೂದಿಸಬೇಕಾಗಿರುತ್ತದೆ.

ಭರ್ತಿಮಾಡುವ ಅರ್ಜಿ ನಮೂನೆಯ ವಿವರಗಳು ಅತ್ಯಂತ ಸರಳವಾಗಿದ್ದು, ಉದ್ಯಮಿ ಸ್ನೇಹಿಯಾಗಿರುತ್ತದೆ. ನೋಂದಾಯಿತ ಜ್ಞಾಪನಾ ಪತ್ರವನ್ನು ಕೈಗಾರಿಕೋದ್ಯಮಿಗಳು ಆನ್‌ಲೈನ್ ಮುಖಾಂತರ ಅರ್ಜಿ ನಮೂನೆ ಭರ್ತಿಮಾಡಿ, ತಮ್ಮ ಸ್ಥಳದಲ್ಲಿಯೇ ಮುದ್ರಣ ಪ್ರತಿಯನ್ನು ಪಡೆದು ತಮ್ಮ ವಿವಿಧ ಕಾರ್ಯಗಳಿಗೆ ಉಪಯೋಗಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಇತರೆ ವಿವರಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವೆಬ್‌ಸೈಟ್ www.investkarnataka.gov.in ನಲ್ಲಿ ಲಭ್ಯವಿರುತ್ತದೆ. ಅಂತರ್ಜಾಲ ಸಂಪರ್ಕದ ಅನುಕೂಲ ಹೊಂದಿರದೆ ಇರುವ ಕೈಗಾರಿಕೋದ್ಯಮಿಗಳು, ತಮ್ಮ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸಂಪರ್ಕಿಸಿ, ಜ್ಞಾಪನಾ ಪತ್ರಗಳ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. ಕೈಗಾರಿಕೋದ್ಯಮಿಗಳು ಇದರ ಸದುಪಯೋಗ ಪಡೆದುಕೊಳ್ಳಲು ಸಣ್ಣ ಕೈಗಾರಿಕಾ ಸಚಿವ ಸತೀಶ್ ಜಾರಕಿಹೊಳಿ ಅವರು ತಿಳಿಸಿದ್ದಾರೆ.

ಬಾಬು:ಕೆಎಂ

## ರಾಷ್ಟ್ರೀಯ ಐಕ್ಯತಾ ಸಪ್ತಾಹ ನಾಳೆಯಿಂದ

ಬೆಂಗಳೂರು, ನವೆಂಬರ್ 18 (ಕರ್ನಾಟಕ ವಾರ್ತೆ)

ಭಾರತದ ಉಕ್ಕಿನ ಮಹಿಳೆ ಮಾಜಿ ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರ ಜನ್ಮ ದಿನಾಚರಣೆಯ ಪ್ರಯುಕ್ತ ನವೆಂಬರ್ 19 ರಿಂದ 25 ರವರೆಗೆ ರಾಷ್ಟ್ರೀಯ ಐಕ್ಯತಾ ಸಪ್ತಾಹವನ್ನು ಆಚರಿಸಲಾಗುವುದು.

ನವೆಂಬರ್ 19 ರಂದು ಅಹಿಂಸೆ, ಕೋಮು ಸೌಹಾರ್ದ, ಜಾತ್ಯಾತೀತತೆಗೆ ಪ್ರಾಧನ್ಯ ನೀಡಲು ರಾಷ್ಟ್ರೀಯ ಐಕ್ಯತಾ ದಿನ, ನವೆಂಬರ್ 20 ರಂದು ಅಲ್ಪ ಸಂಖ್ಯಾತರ ಅಭಿವೃದ್ಧಿಗಾಗಿ ರೂಪಿಸಿರುವ 15 ಅಂಶಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪ್ರಯತ್ನಿಸುವ ಜೊತೆ ಜೊತೆಗೆ ಕೋಮು ಗಲಭೆ ಪ್ರೀಡಿತ ಪ್ರದೇಶಗಳಲ್ಲಿ ಸೋದರತಾ ಭಾವನೆ ಬೆಳಸಲು ಅಲ್ಪಸಂಖ್ಯಾತರ ಕಲ್ಯಾಣ ದಿನ, ನವೆಂಬರ್ 21 ರಂದು ಭಾರತೀಯ ಭಾಷಾ

ಪರಂಪರೆಯ ಗೌರವಿಸಲು, ಭಾಷಾ ಸೌಹಾರ್ಥಾ ದಿನ ನವೆಂಬರ್ 22 ರಂದು ಭೂ ರಹಿತ ಕೃಷಿ ಕಾರ್ಮಿಕರಿಗೆ ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳ ಪ್ರಚುರಪಡಿಸಲು ದುರ್ಬಲ ವರ್ಗಗಳ ಕಲ್ಯಾಣ ದಿನ, ನವೆಂಬರ್ 23 ರಂದು ಭಾರತದ ಸಿರಿವಂತ ಸಂಸ್ಕೃತಿ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಏಕತಾ ದಿನ, ನವೆಂಬರ್ 24 ರಂದು ಮಹಿಳೆಯರನ್ನು ಗೌರವಿಸಲು ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರ ಪಾತ್ರವನ್ನು ಪ್ರತಿಪಾದಿಸಲು ಮಹಿಳಾ ದಿನ ಹಾಗೂ ನವೆಂಬರ್ 25 ರಂದು ಪರಿಸರ ಸಂರಕ್ಷಣೆಗೆ ಒತ್ತು ನೀಡಲು ಪರಿಸರ ರಕ್ಷಣಾ ದಿನವನ್ನಾಗಿ ಆಚರಿಸಲು ಸರ್ಕಾರ ಸುತ್ತೋಲೆ ಹೊರಡಿಸಿದೆ.

ಡಿಪಿಎಂ/ಪಲ್ಲವಿ/ಕೆಎಂ